ಮಾರಾಯ, ಮರೆಯುವುದುಂಟೆ?!'ಎಂದಳು.

'ಶಕುಂತಲೆ ಅಂದಕೂಡ್ಲೆ ನೆನಪಾಯ್ತು...ನೆಕ್ಸ್ಟ್ ಟೈಮ್ ಊರಿಗೆ ಹೋದರೆ ಸುರಗಿ ಮಾಲೆ ಸಿಕ್ತದಾ ನೋಡಿ. ನಾನಿದ್ದ ಕಾಲದಲ್ಲಿ ಬಸ್‌ಸ್ಟ್ಯಾಂಡಲ್ಲಿ, ಸಾಗುವಾನಿ ಮರದ ಕೆಳಗೆ ಮಾರ್ತಿದ್ರು. ಅಂಕೋಲಿಯಲ್ಲಿ ಅದಕ್ಕೆ ಬೋಕಳಹೂ ಅಂತಾರಲ್ವ. ಸ್ಟುಡೆಂಟಿದ್ದಾಗ ಅದನ್ನು ಪುಟಗಳ ನಡುವೆ ಇಟ್ಕೊತ್ತಿದ್ದೆ. ಒಣಗಿದಷ್ಟೂ ಅದರ ಪರಿಮಳ ಜಾಸ್ತಿ. ಅಂಕೋಲಿಯ ಕರಿ ಇಶಾಡ ಮಾವಿಗೆ ವಿಶಿಷ್ಟ ಸ್ವಾದ ಹೇಗೋ, ಹಾಗೇ ಬೋಕಳ ಹೂವಿನಲ್ಲಿ ಆ ಮಣ್ಣಿನ ಘಮವಿದೆ. ಮತ್ತೊಮ್ಮೆ ಆಘ್ರಾಣಿಸುವ ಆಸೆಯಾಗಿದೆ ನಂಗೆ' ಎಂದಳು. ಅಂಕೋಲಿ ಬಿಟ್ಟರೂ ಆ ನೆಲದ ನಂಟನ್ನು ಉಳಿಸಿಕೊಂಡಿರುವ ನಾಗರತಿ ಬಗ್ಗೆ ಹೊಸಬಣ್ಣನಿಗೆ ಅಭಿಮಾನವೇ ಉಕ್ಕಿತು!

ಇಸ್ಕಾನ್ ಆವರಣದೊಳಗೆ ಮುಂಬೈನ ಭೀಡ್ ಪಕ್ಕದಲ್ಲೇ ಇದೆ ಎನ್ನುವುದನ್ನು ನಂಬಲಾಗದಷ್ಟು ಶಾಂತತೆ ಇತ್ತು. ರೆಸ್ಟೋರಂಟಿನಲ್ಲಿ ಸಕಲವೂ ಸುವ್ಯವಸ್ಥಿತವಾಗಿತ್ತು. ವೆಲ್‌ಕಮ್ ಪೇಯಗಳ ನಂತರ ಅವರು ವಿವಿಧ ಭಕ್ಷ್ಯಗಳನ್ನು ಬಡಿಸಿಕೊಂಡರು. ಪ್ರತಿಯೊಂದು ಪುಡ್ಡಿಗೂ ಸಾತ್ವಿಕತೆಯ ರುಚಿ ಬೆರೆತಿತ್ತು. 'ಅಂಕೋಲಿಯ ಮೀನಪಳದಿ ಮುಂದೆ ಈ ಘಾಸಪೂಸ್ ಊಟ ಕಥೆಗಾರರಿಗೆ ಹೇಗನಿಸುತ್ತೋ?' ಎಂದಳು. 'ಖರೆ ಹೇಳ್ತಿ ಮಾರಾಯ್ತಿ, ವೆಜ್ ಖಾನಾ ಇಷ್ಟು ಎಂಜಾಯ್ ಮಾಡ್ತಿರುವುದು ಲೈಫಲ್ಲೇ ಫಸ್ಟ್ ಟೈಮು. ಬಹುಶಃ ಸುಂದರಿಯ ಸಾನ್ನಿಧ್ಯದ ಪ್ರಭಾವ' ಎಂದ. ಹೊಸಬಣ್ಣನ ಮಾತಿಗೆ ನಾಗರತಿ ಸುಂದರವಾಗಿ ನಕ್ಕಳು.

ಕಾಲೇಜಲ್ಲಿದ್ದಾಗ ಜಾತಿ, ಅಂತಸ್ತು ಎಂಬ ಭೇದಭಾವವಿಲ್ಲದೇ ಎಲ್ಲರೊಡನೆ ಬೆರೆಯುತ್ತಿದ್ದ ನಾಗರತಿಯ ಗುಣವನ್ನು ಹೊಸಬಣ್ಣ ತಾರೀಫು ಮಾಡಿದ. 'ಎದುರಿದ್ದವರ ಜಾತಿ ಮತ ಧರ್ಮ ಬಡತನ ಸಿರಿತನಗಳನ್ನು ಪರಿಗಣಿಸದೇ ಮುಕ್ತವಾಗಿ ಮುಗುಳು ನಗುತ್ತಿದ್ರಿ. ನೀವು ಕ್ಯಾಂಪಸ್ಸಿನಲ್ಲಿ ನಡೆದು ಹೋದರೆ ಸ್ನೇಹದ, ಪ್ರೀತಿಯ, ಅಂತಃಕರಣದ ತಂಗಾಳಿ ಸುಳಿದಂತೆ ಅನಿಸುತ್ತಿತ್ತು. ನಿಮ್ಮ ಆ ದಿವ್ಯಗುಣವೇ ಸಮಾಜವು ದೂರವಿಟ್ಟ ನನ್ನಂಥ ಅನಾಮಿಕರಲ್ಲೂ ಕನಸು ಅರಳಲು ಕಾರಣವಾಯ್ತು. ನೋವು, ಅವಮಾನಗಳನ್ನು ಮರೆಯುವುದು ಸಾಧ್ಯವಾಯ್ತು. ಆ ನೆನಪನ್ನು ಎದೆಯಲ್ಲಿನ್ನೂ ಕಾದಿಟ್ಟುಕೊಂಡಿದ್ದೇನೆ. ಆ ಕೃತಜ್ಞತಾ ಭಾವವನ್ನು ಇಂದು ಅರ್ಪಿಸುವ ಗಳಿಗೆ ಬಂದಿದೆ. ದಯವಿಟ್ಟು ಸ್ವೀಕರಿಸಿ' ಎಂದ. ಅವನು ಅಂದದ್ದು ಸ್ವಲ್ಪ ನಾಟಕೀಯ ಅನಿಸಿದರೂ, ಭಾವನೆಗಳನ್ನು ಅವಳು ಗ್ರಹಿಸಿದಳು. 'ಸ್ಮೈಲ್ ಮಾಡುವುದೂ ಆದರ್ಶದ ಮಾತೇ? ನನಗೆ ಸಹಜವಾಗಿ ಒಲಿದ ಗುಣವದು. ಇರಲಿ, ಈಗ ಈ 'ನೀವು ನಾವು' ಬಿಟ್ಟಾಕುವಾ. ಶುದ್ಧ ಅಂಕೋಲಿಗರಾಗುವಾ...ಇಂದು ನಿಂಜೊತೆ ಪ್ಯೂರ್ಅರ್ಲಿ ಪ್ರೇಮದ ಬಗ್ಗೆ ಮಾತಾಡಬೇಕು' ಎಂದು ಅವನ ಕೈಗಳನ್ನು ಆತ್ಮೀಯವಾಗಿ ಸವರಿದಳು. ಆ ಸ್ಪರ್ಶದಿಂದ ಹೊಸಬಣ್ಣ ನವಿರಾಗಿ ಕಂಪಿಸಿದ. ಮುಂದಿನ ಎರಡು ಗಂಟೆಗಳಲ್ಲಿ ಮಾತು ಮಾತು ಮಾತು. ಹಳೆಯದಾದರೂ ಹೊಸಬಣ್ಣನಿಗೆ ಕೆಲವು ಸಂಗತಿಗಳು ಹೊಸತಾಗಿದ್ದವು. ಅಂಕೋಲಿಯ ಪ್ರಸಿದ್ಧ ಪ್ರೇಮಪ್ರಕರಣಗಳ ಬಗ್ಗೆ, ಗುಪ್ತ ಭಾನಗಡಿಗಳ ಬಗ್ಗೂ ನಾಗರತಿಯಲ್ಲಿ ಮಾಹಿತಿಗಳಿದ್ದವು.

ಅವಳಾಡುವ ಮಾತುಗಳು ಚುಂಬಕದಂತೆ ಸೆಳೆಯುತ್ತಿದ್ದರೂ, ಹೊಸಬಣ್ಣನಿಗೆ ಅವು ಹಿಮ್ಮುಖ ಚಲನೆಯಲ್ಲಿವೆ ಎಂಬುದು ಅರಿವಿಗೆ ಬಂತು. ಪರಮ ಸುಂದರಿಯ ಸಾನಿಧ್ಯದಲ್ಲಿರುವ ಈ ಅಪೂರ್ವ ಕ್ಷಣವು ಗತದಲ್ಲಿ ವ್ಯರ್ಥವಾಗುತ್ತಿರುವ ಬಗ್ಗೆ ಚಿಕ್ಕ ಆತಂಕ ಶುರುವಾಯ್ತು. ನಾಗರತಿ ತನ್ನೆಲ್ಲ ಸಂಭ್ರಮವನ್ನು ಹಳೆಯ ನೆನಪುಗಳಿಂದ ಮೊಗೆಯುತ್ತಿದ್ದಳು. ವಾಸುವಿನೊಂದಿಗೆ ಪ್ರೀತಿ ಸಂಭವಿಸಿದ್ದು, ಅದು ಭಗ್ನಪ್ರೇಮವಾಗಿ ಅಂತ್ಯಗೊಂಡದ್ದು ಎಲ್ಲವನ್ನೂ ಕತೆಯಾಗಿಸುತ್ತಿದ್ದಳು. ಅವಳ ಕಥನಗುಣಕ್ಕೆ ಮರುಳಾಗಿ ಹೊಸಬಣ್ಣ ಅವಳನ್ನು ವರ್ತಮಾನಕ್ಕೆ ತರುವುದನ್ನು ವಿಳಂಬಿಸಿದ್ದ. ತನ್ನೊಡನೆ ನಾಗರತಿ ಬದುಕಿನ ಖಾಸಗಿ ಕ್ಷಣಗಳನ್ನು ಹಂಚಿಕೊಳ್ಳುತ್ತಿರುವುದಕ್ಕೆ ಏನು ಕಾರಣ? ಅವು ಸಂಭವಿಸಿದ ಕಾಲದೇಶಕ್ಕೆ ತಾನು ಸಾಕ್ಷಿಯಾಗಿರುವುದೇ? ಅಥವಾ ಈಗ ತಾನು ಕತೆಗಾರನಾದ ಕಾರಣಕ್ಕೆ ಇಂಥ ನಿವೇದನೆಯನ್ನು ಆಲಿಸುವ ಅರ್ಹತೆಯನ್ನು ಗಳಿಸಿರುವೆನೇ?

'ವಾಸು ಜೊತೆಗಿನ ಲವ್ ಒಂದು ಟ್ರಾಜಿಡಿ ಆಯ್ತು ಮಾರಾಯಾ. ಆ ಶಾಕ್‌ನಲ್ಲೇ ಅಂಕೋಲಿಗೆ ಗುಡ್ ಬೈ ಹೇಳಿದ್ದು. ಆದರೆ ಅಂಕೋಲಿ ಬಿಟ್ಟರೂ ಸಂಕೋಲೆ